ಹುಬ್ಬಳ್ಳಿ-ಕಾರವಾರ ರೈಲ್ವೆ ಲೈನ್ ಯೋಜನೆ

782 - ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ ನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಕಾರವಾರ ರೈಲ್ವೆ ಲೈನ್ ಯೋಜನೆಯ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲಾಗಿದೆಯೇ?*

ಆ) *ಇದರ ಅವಶ್ಯಕತೆ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಬಹಳ ಅನುಕೂಲತೆ ಇದೆಯೆಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಇ) *ಹಾಗಾದರೆ ಈ ಯೋಜನೆಗೆ ಎಷ್ಟು ಹಣ ನಿಗಧಿ ಮಾಡಲಾಗಿದೆ ಮತ್ತು ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರೈಲ್ವೆಯವರು ಅಂತಿಮ ಸಮೀಕ್ಷೆಯನ್ನು 40 ಕಿ.ಮಿ.ಗೆ ಪೂರೈಸಿದ್ದಾರೆ. ಬಾಕಿ 104 ಕಿ.ಮೀ. ಉದ್ದಕ್ಕೆ ಗುತ್ತಿಗೆದಾರರನ್ನು ಗೊತ್ತುಪಡಿಸಿದೆ.

ಆ) ಹೌದು.

ಇ) ರೈಲ್ವೆಯವರು ಸದರಿ ಯೋಜನೆಯನ್ನು1996-97ರ ಪೂರಕ ಟಿಪ್ಪಣಿಯಲ್ಲಿ ಪ್ರಸ್ತಾವಿಸಿದ್ದರು. ಹಾಗೂ 1.00 ಕೋಟಿ ರೂ. 1996-97ರಲ್ಲಿ ನಿಗದಿಪಡಿಸಿದ್ದರು. ಸಮೀಕ್ಷೆ ಮುಗಿದು ಭೂಸ್ವಾಧೀನದ ನಂತರ ಈ ಯೋಜನೆ ಕೈಗೊಳ್ಳಲು ರೈಲ್ವೆಯವರಿಗೆ ಒತ್ತಾಯಿಸಲಾಗುವುದು.

ಮೀನುಗಾರಿಕೆಗಾಗಿ ರಾಜ್ಯ ಸರ್ಕಾರ ನಿಗದಿಪಡಿಸಿದ ಅನುದಾನ

783 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಮೀನುಗಾರಿಕೆಗಾಗಿ ರಾಜ್ಯ ಸರ್ಕಾರ1996-97, 97-98 ಮತ್ತು 98-99ರಲ್ಲಿ ನಿಗಧಿಪಡಿಸಿದ ಅನುದಾನವೆಷ್ಟು?*

ಆ) *ಇದರಲ್ಲಿ ಖರ್ಚಾದ ಹಣವೆಷ್ಟು? ಖರ್ಚು ಮಾಡದಿರುವ ಹಣವೆಷ್ಟು? ಖರ್ಚು ಮಾಡದಿರಲು ಕಾರಣವೇನು?*

ಇ) *1983ರಲ್ಲಿ ಡೀಸಲ್ ಬೆಲೆ ಲೀಟರ್‌ಗೆ ರೂ.3.50 ಇರುವಾಗ ಮೀನುಗಾರಿಕೆಗೆ ನೀಡುವ ಡೀಸಲ್ ಸಬ್ಸಿಡಿ 0.85 ಇದ್ದು ಪ್ರಸ್ತುತ ಡೀಸಲ್ ಬೆಲೆ ಲೀಟರ್1ರ 12.40 ಇರುವಾಗ ಸಬ್ಸಿಡಿ ದರವನ್ನು ಹೆಚ್ಚು ಮಾಡದಿರಲು ಕಾರಣವೇನು?*

ಈ) *ಈ ವರ್ಷ ಮುಂಗಡ ಪತ್ರದಲ್ಲಿ ಮೀನುಗಾರಿಕೆಗೆ ಸಾಕಷ್ಟು ಹಣ ಒದಗಿಸದೇ ಮೀನುಗಾರಿಕೆಯನ್ನು ಕಡೆಗಣಿಸಲು ಕಾರಣವೇನು?*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಮೀನುಗಾರಿಕೆಗಾಗಿ ರಾಜ್ಯ ಸರ್ಕಾರವು ಈ ಕೆಳಕಂಡಂತೆ ಅನುದಾನವನ್ನು ನಿಗಧಿಗೊಳಿಸಿರುತ್ತದೆ.

ವರ್ಷ	ಅನುದಾನ (ರೂ. ಲಕ್ಷಗಳಲ್ಲಿ)
1996-97	3186.51
1997-98	3275.63
1998-99	2971.69

ಆ)

ವರ್ಷ	ಖರ್ಚಾದ ಹಣ ರೂ. ಲಕ್ಷಗಳಲ್ಲಿ	ಖರ್ಚು ಮಾಡದಿರುವ ಹಣ ರೂ. ಲಕ್ಷಗಳಲ್ಲಿ
1996-97	2229.59	956.92
1997-98	2677.64	597.99
1998-99	ಆರ್ಥಿಕ ವರ್ಷವು ಈಗಷ್ಟೇ ಪ್ರಾರಂಭವಾಗಿರುವುದರಿಂದ ಅನ್ವಯಿಸುವುದಿಲ್ಲ.	

I 1996-97ನೇ ಸಾಲಿನಲ್ಲಿ ಖರ್ಚು ಮಾಡದಿರಲು ಕಾರಣಗಳು :

1. ಮಲ್ಪೆ ಮೀನುಗಾರಿಕೆ ಬಂದರಿನ 2ನೇ ಹಂತದ ಕಾಮಗಾರಿಗೆ ಭಾರತ ಸರ್ಕಾರದ ಅನುಮೋದನೆ ದಿನಾಂಕ:19.2.96ರಲ್ಲಿ ದೊರಕಿದ್ದು, ರಾಜ್ಯ ಸರ್ಕಾರದ ಆಡಳಿತ ಮಂಜೂರಾತಿ 16.12.96ರಲ್ಲಿ ದೊರಕಿರುತ್ತದೆ. ಈ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯು ಅನುಷ್ಠಾನಗೊಳಿಸಬೇಕಾಗಿದ್ದು, ಮಂಜೂರಾತಿ ವಿಳಂಬದ ಕಾರಣದಿಂದಾಗಿ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಿರುವುದಿಲ್ಲ.

2. ಭೂ ಸ್ವಾಧೀನ ಮತ್ತು ಟೆಂಡರ್‌ಗಳ ಒಪ್ಪಿಗೆ ಮುಂತಾದ ಕಾರಣಗಳಿಂದಾಗಿ ಅಪೇಕ್ಷಣಾ ಮತ್ತು ಇಳಿದಾಣಗಳ ನಿರ್ಮಾಣದ ಕಾಮಗಾರಿಗಳು ವಿಳಂಬವಾಗಿದ್ದು, ನಿಗಧಿತ ಅನುದಾನವನ್ನು ಖರ್ಚು ಮಾಡಲು ಸಾಧ್ಯವಾಗಿರುವುದಿಲ್ಲ.

3. ಕೇಂದ್ರ ಪುರಸ್ಕೃತ ಮೀನುಗಾರರ ಕಲ್ಯಾಣನಿಧಿ ಯೋಜನೆಯಡಿಯಲ್ಲಿ ಮೀನುಗಾರರ ವಸತಿ ನಿರ್ಮಾಣ ಯೋಜನೆಗೆ ಭಾರತ ಸರ್ಕಾರದ ಮಂಜೂರಾತಿ ದೊರಕದ ಕಾರಣ ಅನುದಾನ ಉಳಿತಾಯವಾಗಿರುತ್ತದೆ.

4. ಕರ್ನಾಟಕ ಕರಾವಳಿ ಮೀನುಗಾರಿಕೆ ಅಧಿನಿಯಮಕ್ಕೆ ರಾಜ್ಯ ಸರ್ಕಾರದ ಅನುಮೋದನೆ ಹೊಂದಿ ವಿಧೇಯಕವಾಗಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸಲು ಗಸ್ತು ದೋಣಿಗಳನ್ನು ತಾಂತ್ರಿಕ ಕಾರಣಗಳಿಂದಾಗಿ ಖರೀದಿಸಲು ಸಾಧ್ಯವಾಗದ ಕಾರಣ ಹಣ ಉಳಿತಾಯವಾಗಿರುತ್ತದೆ.

II. 1997-98ನೇ ಸಾಲಿನಲ್ಲಿ ಖರ್ಚು ಮಾಡದಿರಲು ಕಾರಣಗಳು

1. ಅಪೇಕ್ಷಣಾ ಮತ್ತು ಇಳಿದಾಣ ನಿರ್ಮಾಣ ಯೋಜನೆಯಡಿಯಲ್ಲಿ ಟೆಂಡರ್‌ಗಳನ್ನು ಅಂತಿಮಗೊಳಿಸಿ ಕಾರ್ಯ ಪ್ರಾರಂಭ ಮಾಡುವುದರಲ್ಲಿ ವಿಳಂಬವಾಗಿರುವುದರಿಂದ ಹಾಗೂ ಕರ್ನಾಟಕ ಕರಾವಳಿ ಮೀನುಗಾರಿಕೆ ಅಧಿನಿಯಮ ಅನುಷ್ಠಾನಕ್ಕಾಗಿ ಗಸ್ತು ದೋಣಿಗಳ ಖರೀದಿ ತಾಂತ್ರಿಕ ಕಾರಣಗಳಿಂದಾಗಿ ಸಾಧ್ಯವಾಗದ ಕಾರಣ ಹಣ ಉಳಿತಾಯವಾಗಿರುತ್ತದೆ.

2. ಕೇಂದ್ರ ಪುರಸ್ಕೃತ ಸಮಗ್ರ ಜಲಾಶಯ ಮೀನುಗಾರಿಕೆ ಯೋಜನೆ ಅನುಷ್ಠಾನಕ್ಕೆ ಅನುಮತಿ ದೊರಕದ ಕಾರಣ ಹಾಗೂ ಬಹುದಿನ ದೂರ ಸಮುದ್ರ ಮೀನುಗಾರಿಕೆ ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ ದೊರಕದಿಲ್ಲವಾದ ಕಾರಣ ಹಾಗೂ ಒಳನಾಡು ಮೀನುಗಾರಿಕೆ ಮಾರುಕಟ್ಟೆ ಪೂರ್ವಭಾವಿ ಸಿದ್ದತೆಯ ಪೂರ್ವ ಸಿದ್ದತೆಗಾಗಿ ಹಮ್ಮಿಕೊಂಡ ಯೋಜನೆಗಳಿಗೆ ಪೂರ್ಣವಾಗಿ ಹಣ ಬಿಡುಗಡೆಯಾಗದ ಕಾರಣ ಅನುದಾನವು ಉಳಿತಾಯವಾಗಿರುತ್ತದೆ.

ಇ) ಪ್ರತಿ ಲೀಟರ್‌ಗೆ ಹೆಚ್ಚಿರುವ ತೆರಿಗೆ ಮೇಲಿನ ಸೂಕ್ತ ಸಹಾಯ ಧನವನ್ನು ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ರಾಜ್ಯ ಆಯವ್ಯಯದಲ್ಲಿ ಲಭ್ಯವಿರುವ ಹಣದಲ್ಲಿ ಈ ಅನುದಾನ ಒದಗಿಸಲಾಗಿದೆ. ಇರುವ ಎಲ್ಲಾ ಅನುದಾನವನ್ನು ಉಪಯೋಗಿಸಿಕೊಂಡರೆ ಮೀನುಗಾರಿಕೆ ಕಡೆಗಣಿಸಿದಂತೆ ಆಗುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ರಸ್ತೆಗಳ ದುರಸ್ತಿ

784 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಸಂಖ್ಯೆ ಎಷ್ಟು? (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಈ ಜಿಲ್ಲೆಗೆ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಹಣವೆಷ್ಟು?

ಇ) ಲೋಕೋಪಯೋಗಿ ಇಲಾಖೆಯಿಂದ ಹಣ ಬಿಡುಗಡೆ ಆಗದೆ ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೆ ಪೂರ್ತಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡುವುದು ಹಾಗೂ ಯಾವಾಗ ರಸ್ತೆ ಅಭಿವೃದ್ಧಿ ಪೂರ್ಣಗೊಳಿಸುವುದು?